# ಸಂತೆಬೆನ್ನೂರಿನ ಸಂತೆಹೊಂಡ ರಾಮತೀರ್ಥ ಪುಷ್ಕರಣಿ



ಪುಷ್ಕರಣಿ ಗ್ರಾನೈಟ್ ಮೆಟ್ಟಿಲುಗಳು

■ ಚಿತ್ರ–ಲೇಖನ: **ಜಿ. ಆರ್. ಪಂಡಿತ್, ಸಾಗರ**

ಸಂತೆಬೆನ್ನೂರು 'ರಾಮತೀರ್ಥ ಪುಷ್ಕರಣಿ' ಯಿಂದಾಗಿಯೇ ಪ್ರಸಿದ್ಧವಾಗಿದೆ. ವಾಸ್ತುಶಿಲ್ಪಕ್ಕೆ ಹೆಸರಾದ ಈ ಪುಷ್ಕರಣಿಯನ್ನು 'ಪವಿತ್ರ ಕೆರೆ' ಅಥವಾ 'ಸಂತೆಹೊಂಡ' ಎಂದೂ ಕರೆಯುತ್ತಾರೆ. ದಾವಣಗೆರೆಯಿಂದ ಸುಮಾರು 40 ಕಿ.ಮೀ ದೂರದಲ್ಲಿದೆ. 16 ನೇ ಶತಮಾನದಲ್ಲಿ ಈ ಪ್ರದೇಶ ವಿಜಯನಗರ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಆ ಸಮಯದಲ್ಲಿ ಇಲ್ಲಿ ಆಳುತ್ತಿದ್ದ ಸ್ಥಳೀಯ ಪಾಳೇಗಾರ 'ಕೆಂಗ ಹನುಮಂತಪ್ಪ ನಾಯಕ' ಈ ಪುಷ್ಕರಣಿಯನ್ನು ಕಟ್ಟಿಸಿದನೆಂದು ಇತಿಹಾಸ ಹೇಳುತ್ತದೆ. ಐದು ಶತಮಾನಗಳ ನಂತರವೂ ಸುಸ್ಥಿತಿಯಲ್ಲಿರುವ ಈ ವಿನ್ಯಾಸ ಇಂದಿಗೂ ಪ್ರವಾಸಿಗರ ಗಮನ ಸೆಳೆಯುತ್ತಿದೆ.

ಮುಖ್ಯದ್ವಾರದಿಂದ 52 ಗ್ರಾನೈಟ್ ಮೆಟ್ಟಿಲುಗಳನ್ನು ಇಳಿದು ಹೋದರೆ ಎದುರಾಗುವುದೇ ಪುಷ್ಕರಣಿ. ಇದರ ಸುತ್ತ ಎಂಟು ಗೋಪುರಗಳಿದ್ದು ಅವುಗಳಲ್ಲಿ ಈಗ ಕೇವಲ ಆರು ಗೋಪುರಗಳು ಮಾತ್ರ ಸುಸ್ಥಿತಿಯಲ್ಲಿವೆ. ನಾಲ್ಕು ಕಡೆಗಳಲ್ಲೂ ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ ಮೆಟ್ಟಿಲುಗಳಿವೆ.

ಪುಷ್ಕರಣಿಯ ಮಧ್ಯದಲ್ಲಿ 'ವಸಂತ ಮಂಟಪ'ವನ್ನು ನಿರ್ಮಿಸಲಾಗಿದೆ. ಕೊಳದ ಮಧ್ಯದಲ್ಲಿರುವ ಈ ಮಂಟಪ ಒಂದು ಸುಂದರ ಕಲಾಕೃತಿ. ಈ ಮಂಟಪ ಎರಡು ಅಂತಸ್ತುಗಳನ್ನು ಹೊಂದಿದ್ದು ಮೊದಲನೆಯ ಮತ್ತು ಎರಡನೆಯ ಅಂತಸ್ತುಗಳೆರಡೂ ಕಲ್ಲಿನಲ್ಲಿ ನಿರ್ಮಿತವಾಗಿವೆ. ಮಂಟಪದ ಗೋಪುರ ಮಣ್ಣು ಮತ್ತು ಇಟ್ಟಿಗೆಯಿಂದ ನಿರ್ಮಾಣಗೊಂಡಿದೆ. ಹಿರೇಕೋಗಿಲು, ಕಲ್ಲೇಶ್ವರ, ಮಲ್ಲೇಶ್ವರ ಇಲ್ಲಿನ ಕೆಲವು ಪಾಳು ಗುಡಿಗಳು.

ಸುಮಾರು 250 ಅಡಿ ಉದ್ದ, 240 ಅಡಿ ಅಗಲ, ಸುಮಾರು 30 ಅಡಿ ಆಳ ಹೊಂದಿರುವ ಈ ಪುಷ್ಕರಣಿ ಮತ್ತು ಅದರ ಮಂಟಪಗಳು, ಗೋಪುರ, ಕಂಬಗಳು ಎಲ್ಲವೂ ಇಂಡೋ–ಅರೇಬಿಕ್ ವಾಸ್ತು ಶೈಲಿಯಲ್ಲಿವೆ. ವರ್ಷ ಪೂರ್ತಿ ನೀರಿನಿ0ದ ತುಂಬಿರುವ ಈ ಪುಷ್ಕರಣಿಯ ಮಧ್ಯದಲ್ಲಿರುವ ವಸಂತ ಮಂಟಪ ನೀರಿನಲ್ಲಿ ತೇಲುತ್ತಿರುವಂತೆ ನೋಡುಗರಿಗೆ ಭಾಸವಾಗುತ್ತದೆ. ಇದನ್ನು ಕಾರಂಜಿ ಮಂಟಪ ಎಂದೂ ಕರೆಲಾಗುತ್ತದೆ. ಕೆತ್ತನೆಗಳಿಂದ ಕೂಡಿದ ಗೋಳಾಕಾರದ ಗುಮ್ಮಟ, ಸುತ್ತಲ ಕಂಬಗಳು ಕಟ್ಟಡದ ಅಂದವನ್ನು ಹೆಚ್ಚಿಸಿವೆ.

ವರ್ಷಕ್ಕೊಮ್ಮೆ ನಡೆಯುವ ತೆಪ್ಪೋತ್ಸವದಲ್ಲಿ ದೇವರ